QP CODE: 31101

# ಪ್ರಥಮ ಸೆಮಿಸ್ಟರ್ ಬಿ.ಎಸ್ಸಿ, ಪದವಿ ಪರೀಕ್ಷೆ, ಮೇ / ಜೂನ್ 2022
## (CBCS NEP SCHEME)
## ಕನ್ನಡ ಭಾಷಾ ಪತ್ರಿಕೆ - 1
## (NSA 0010) : LANG : ಸಮನ್ವಯ - 1

ಸಮಯ : 2 ಗಂಟೆಗಳು | ಅಂಕಗಳು : 60

### ಭಾಗ - 1

1. ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಉತ್ತರಿಸಿ. 1x10=10

i. ಕರ್ನಾಟಕದ ಭೌಗೋಳಿಕ ವಿಸ್ತೀರ್ಣವು ಇಲ್ಲಿನ ಯಾವ ನದಿಗಳ ನಡುವೆ ವಿಸ್ತಾರಗೊಂಡಿದೆ.
(ಅ) ತುಂಗ-ಭದ್ರ (ಆ) ಶರಾವತಿ-ವೇದಾವತಿ (ಇ) ಕೃಷ್ಣ-ಕಾವೇರಿ (ಈ) ಕಾವೇರಿ-ಗೋದಾವರಿ

ii. 'ಇಳೆ' – ಎಂದರೆ
(ಅ) ಆಕಾಶ (ಆ) ವಾಯು (ಇ) ಭೂಮಿ (ಈ) ಪ್ರಕೃತಿ

iii. 'ಕನ್ನಡ ದೀಪ' - ಈ ಕೆಳಗಿನ ಯಾವ ಸಂವೇದನೆಯ ಸಂಕೇತ.
(ಅ) ಪ್ರೀತಿ (ಆ) ಅಭಿಮಾನ (ಇ) ತ್ಯಾಗ (ಈ) ಈ ಮೇಲಿನ ಎಲ್ಲವೂ

iv. 'ಇರುವುದೊಂದೆ ಭೂಮಿ'-ಯ ಲೇಖಕರು.
(ಅ) ಹೆಚ್. ನರಸಿಂಹಯ್ಯ (ಆ) ಪ್ರೊ.ನಾಗೇಶ ಹೆಗಡೆ (ಇ) ಸ. ಉಷಾ (ಈ) ಕೆ. ಶಿವರಾಮ ಕಾರಂತ

v. 'ಮಣ್ಣ'ನ್ನು 'ಹೊನ್ನು' ಎಂದು ಆರಾಧಿಸಿದವರು.
(ಅ) ವಚನಕಾರರು (ಆ) ಕೀರ್ತನಕಾರರು
(ಇ) ಜನಪದರು (ಈ) ಈ ಮೇಲಿನ ಯಾರು ಅಲ್ಲ

vi. 'ವೈಜ್ಞಾನಿಕ ಮಾರ್ಗ' - ಎಂದರೆ.
(ಅ) ಸಂಪ್ರದಾಯದ ಮಾರ್ಗ (ಆ) ಜ್ಞಾನ ಸಂಪಾದನೆಯ ಮಾರ್ಗ
(ಇ) ನಂಬಿಕೆಯ ಮಾರ್ಗ (ಈ) ಮೇಲಿನ ಯಾವುದೂ ಅಲ್ಲ

vii. 'ದೇವರಿಗಿಂತಲೂ ಜೀವನ ಹಿರಿದು' - ಎಂದರು
(ಅ) ಕುವೆಂಪು (ಆ) ದ.ರಾ.ಬೇಂದ್ರೆ
(ಇ) ಕೆ. ಶಿವರಾಮ ಕಾರಂತ (ಈ) ಕೆ.ಎಸ್. ನರಸಿಂಹ ಸ್ವಾಮಿ

viii. ಪುಟಗೌರಿಯ ನವಿಲಿನ ಬಣ್ಣ.
(ಅ) ಹಸಿರು (ಆ) ನೀಲಿ (ಇ) ಕೆಂಪು (ಈ) ಯಾವುದೂ ಅಲ್ಲ

ix. 'ಕಾಣದಂತೆ ಮಾಯವಾದನೋ' - ಚಲನಚಿತ್ರ ಗೀತೆ ಹಾಡಿದವರು.
(ಅ) ದಿ. ಡಾ. ರಾಜ್‌ಕುಮಾರ್ (ಆ) ದಿ. ಪುನೀತ್ ರಾಜ್‌ಕುಮಾರ್
(ಇ) ಶಿವರಾಜ್ ಕುಮಾರ್ (ಈ) ರಾಘವೇಂದ್ರ ರಾಜ್‌ಕುಮಾರ್

x. ಜ್ಯೋತಿಷ್ಯದ ಪ್ರಕಾರ ಗ್ರಹಗಳ ಸಂಖ್ಯೆ.
(ಅ) 5 (ಆ) 10 (ಇ) 9 (ಈ) 6

## ಭಾಗ - 2

ಯಾವುದಾದರೂ ಐದು ಪ್ರಶ್ನೆಗಳಿಗೆ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ. 5x3=15

2. ಕನ್ನಡಿಗರ ಗುಣ ಸ್ವಭಾವ.
3. 'ಯಾರ್‍ಯಾರ ನೆನೆಯಾಲಿ'
4. ವೈಜ್ಞಾನಿಕ ಮನೋಭಾವ
5. ಹೊಸ ಹುಟ್ಟಿನ ಹಾಡಿನಲ್ಲಿ ವ್ಯಕ್ತವಾಗಿರುವ ಮಹಿಳಾ ಸಂವೇದನೆ
6. ಒಡಳಾಲದ ಪುಟಗೌರಿ
7. 'ಕಾಣದಂತೆ ಮಾಯವಾದನೋ' ಗೀತೆಯ ಪ್ರಾಕೃತಿಕ ಸೌಂದರ್ಯದ ವಿಸ್ಮಯಗಳು.
8. ಭಾಗ್ಯದ ಬಳೆಗಾರ
9. ದೇವನೂರು ಮಹಾದೇವ ಅವರ ಪ್ರಾದೇಶಕ ಭಾಷೆಯ ವೈಶಿಷ್ಟ.

## ಭಾಗ - 3

ಯಾವುದಾದೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. 3x5=15

10. 'ಹಚ್ಚೇವು ಕನ್ನಡದ ದೀಪ' - ಕವಿತೆಯ ವಿಶಿಷ್ಟತೆಯನ್ನು ಕುರಿತು ಬರೆಯಿರಿ.
11. 'ಭೂಮಿ ಚೈತನ್ಯ ಮತ್ತು ಪ್ರೀತಿಯ ಸಂಕೇತ' - ಬೇಂದ್ರೆಯವರ ಕಾವ್ಯ ಸಂದರ್ಭದಲ್ಲಿ ಚರ್ಚಿಸಿ.
12. 'ಭೂಮಿ'ಯ ಬಗೆಗಿನ ನಾಗೇಶ್ ಹೆಗಡೆಯವರ ಕಾಳಜಿಯನ್ನು ವಿವರಿಸಿ.
13. ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಕವಿತೆಯ ವೈಚಾರಿಕತೆಯ ಹಿನ್ನೆಲೆಯಲ್ಲಿ ಚರ್ಚಿಸಿ.
14. 'ಹೊಲ ಬಿತ್ತಿ ಬರುವಾಗ' ಜನಪದ ಕಾವ್ಯದಲ್ಲಿ ಸಾಂಸ್ಕೃತಿಕ ನಂಬಿಕೆಗಳು ಹಾಡಾದ ಬಗೆಯನ್ನು ವಿವರಿಸಿ.

## ಭಾಗ - 4

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. 2x10=20

15. 'ವಿದ್ಯಾರ್ಥಿಗಳಿಗೇಕೆ ಸಾಹಿತ್ಯ', ಕುವೆಂಪು ಅವರ ಲೇಖನವನ್ನು ಚರ್ಚಿಸಿ.

**ಅಥವಾ**

'ಕುಂಕುಮ ಭೂಮಿ'-ಕವಿತೆ ಒಂದು ಉತ್ತಮ ಭೂಮಿಗೀತೆ ವಿಮರ್ಶಿಸಿ.

16. ಜ್ಯೋತಿಷ್ಯ ಅರ್ಥಪೂರ್ಣವೋ, ಅರ್ಥರಹಿತವೋ? ವಿಚಾರಮಾಡಿ.

**ಅಥವಾ**

'ದೇವರಿಗಿಂತ ಜೀವನ ದೊಡ್ಡದು, ಅದೇ ದೇವರ ಮೂಲ' - ಕಾರಂತರ ಈ ಹೇಳಿಕೆಯನ್ನು ಸಮರ್ಥಿಸಿ.

* * *

QP CODE: 10301A

# ತೃತೀಯ ಸೆಮಿಸ್ಟರ್ ಬಿ.ಎ./ಬಿ.ಎಸ್. ಡಬ್ಲ್ಯೂ. ಪದವಿ ಪರೀಕ್ಷೆ

## ಎಪ್ರಿಲ್/ಮೇ 2022

## (SAC/SWC 010) ಕನ್ನಡ ಭಾಷಾ ಪತ್ರಿಕೆ - ೩

## ಭಾಷಾ ಬೆಡಗು - ೩

(2019-20ನೇ ಸಾಲಿನ ಬಿ.ಎ./ಬಿ.ಎಸ್. ಡಬ್ಲ್ಯೂ ವಿದ್ಯಾರ್ಥಿಗಳಿಗೆ)

(2018-19ನೇ ಸಾಲಿನ ಬಿ.ಎ./ಬಿ.ಎಸ್ಸಿ./ಬಿ.ಎಸ್. ಡಬ್ಲ್ಯೂ ರಿಪೀಟರ್ಸ್ ವಿದ್ಯಾರ್ಥಿಗಳಿಗೆ)

ಅವಧಿ : 3 ಗಂಟೆಗಳು ಗರಿಷ್ಠ ಅಂಕಗಳು : 80

1. ಅ) ಒಂದು ಪದ್ಯದ ಭಾವ ಸ್ವಾರಸ್ಯವನ್ನು ವಿವರಿಸಿ. (1x4=04)

೧) ನಡೆವುದೊಂದೇ ಭೂಮಿ । ಕುಡಿವುದೊಂದೇ ನೀರು ।
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ ।
ನಡುವೆ ಎತ್ತಣದು ? ಸರ್ವಜ್ಞ ॥

೨) ಗಡಿಯಲ್ಲಿನ ಎಲ್ಲಾ ಯುದ್ಧಗಳು ನಿಂತರೂ
ನಿಲ್ಲಬಹುದು,
ನಿಲ್ಲುವುದಿಲ್ಲ ದಿನನಿತ್ಯ
ನಡೆಯುವ ನನ್ನ ಕೇರಿಯ ಮೇಲಿನ ಯುದ್ಧ

ಆ) ಹತ್ತು ಪದಗಳಿಗೆ ಅರ್ಥ ಬರೆಯಿರಿ. (10x½=05)

ಕಿನಿಸಿ, ಮಾರ್ಮಲೆ, ಅಂಬಕಳ, ಚಿಗರೆ, ಅಗಸಿ, ವಿಧಾತ, ಕಂಟಿ, ಕಪ್ಪರ, ಇರುಳು, ಫಸಣಿ, ನಿಚಯ, ಅಂಜನ

ಇ) ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ. (2x4=08)

೧) ಕಸವರ ೨) ಪ್ರತಿಜ್ಞೆ ೩) ಸಾಬ್ರಜ್ಜ ೪) ಒಬ್ಬ ತಂದೆಯ ಹಾಡು

2. ಎರಡು ಪ್ರಶ್ನೆಗಳಿಗೆ ಉತ್ತರಿಸಿ. (2x8=16)

೧) 'ದೇವ ದೇವನೊಲ್ದನ ಕುಲಂ ಸತ್ಕುಲಂ' - ಈ ಹೇಳಿಕೆಯನ್ನು ಪಠ್ಯದ ಹಿನ್ನೆಲೆಯಲ್ಲಿ ವಿಶದಪಡಿಸಿ.

೨) ಸಮಾಜದ ಕಟ್ಟುಪಾಡುಗಳಿಗೆ ಬಲಿಯಾದ ದೇವದಾಸಿಯ ಮಗಳ ಸ್ವಗತವನ್ನು ವಿವರಿಸಿ.

೩) 'ಕುಲಂ ಕುಲಮಲ್ತು ಚಲಂ ಕುಲಂ' ಎಂದು ಕರ್ಣನು ಹೇಳಲು ಕಾರಣವೇನು? ವಿವರಿಸಿ.

೪) ಬಡವರ ಅಸಹಾಯಕ ಸ್ಥಿತಿಯನ್ನು 'ಮೂಡಿತೊಂದು ಕೆಂಪು ಚುಕ್ಕಿ' ಕವನ ಹೇಗೆ ಧ್ವನಿಸುತ್ತದೆ? ವಿವರಿಸಿ.

3. ಮೂರು ಪ್ರಶ್ನೆಗಳಿಗೆ ಉತ್ತರಿಸಿ. (3x5=15)

೧) 'ನಾವೆಲ್ಲರು ಒಂದೇ ಜಾತಿ' ಕವನದಲ್ಲಿ ವ್ಯಕ್ತವಾದ ಹೊಸ ನಾಡನ್ನು ಕಟ್ಟುವ ಹಂಬಲವನ್ನು ವಿವರಿಸಿ.

೨) 'ಇಪ್ಪತ್ತೊಂದನೆಯ ಶತಮಾನಕ್ಕೆ ಇಪ್ಪತ್ತನೆಯ ಶತಮಾನದ ಹಾಡು' ಕವಿತೆಯ ಆಶಯವನ್ನು ವಿವರಿಸಿ.

೩) ಕಾಡಿಗಿಂತ ಭೀಕರವಾದ ನಾಡಿನ ಸ್ಥಿತಿಯನ್ನು 'ಕಾಡು' ಕವನದ ಹಿನ್ನೆಲೆಯಲ್ಲಿ ವಿಶದಪಡಿಸಿರಿ.

೪) ಅನುಸೂಯ ಕಾಂಬಳೆಯವರು ಚಿತ್ರಿಸಿದ ಮುಳ್ಳುಕಂಟಿಯ ನಡುವಿನ ಹೆಣ್ಣಿನ ಬದುಕನ್ನು ಕುರಿತು ಬರೆಯಿರಿ.

೫) 'ಭಿನ್ನ ಭೇದವ ಮಾಡಬ್ಯಾಡಿರಿ' ತತ್ವ ಪದದಲ್ಲಿನ ಜಾತ್ಯಾತೀತತೆಯ ಅಂಶಗಳನ್ನು ವಿವರಿಸಿ.

4. **ಕೆಳಗಿನ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** **(2x8=16)**

೧) ಜಾತ್ಯಾತೀತತೆ ಕುರಿತ ಬರಗೂರು ರಾಮಚಂದ್ರಪ್ಪರವರ ವಿಚಾರಧಾರೆಗಳನ್ನು ವಿಶದಪಡಿಸಿ.

೨) ಬಹು ಸಂಸ್ಕೃತಿಯ ಮೇಲಾಗುವ ಏಕಸಂಸ್ಕೃತಿಯ ದಬ್ಬಾಳಿಕೆಯನ್ನು ಪಠ್ಯದ ಆಧಾರದಲ್ಲಿ ವಿವರಿಸಿ.

೩) ಡಾ. ಎಚ್. ನರಸಿಂಹಯ್ಯನವರು ಹೋರಾಟದ ಹಾದಿಯಲ್ಲಿ ಮೂಢನಂಬಿಕೆಗಳನ್ನು ಹೇಗೆ ನಿರಾಕರಿಸಿದ್ದಾರೆ? ವಿವರಿಸಿ.

೪) ಅಕ್ಕನ ವಚನಗಳಲ್ಲಿ ವ್ಯಕ್ತವಾದ ಸ್ಫೋಟ ಗುಣವನ್ನು ಕುರಿತು ಬರೆಯಿರಿ.

5. ಅ) **ಕೆಳಗಿನ ಒಂದು ಪ್ರಶ್ನೆಗೆ ಉತ್ತರಿಸಿ.** **(1x8=08)**

೧) 'ಒಡಲಾಳ' ದಲ್ಲಿ ಚಿತ್ರಿತವಾದ ದಲಿತರ ಬಡತನ ಮತ್ತು ಹಸಿವಿನ ಸಮಸ್ಯೆಯನ್ನು ವಿವರಿಸಿ.

೨) ಸಾಕವ್ವನ ಜೀವನ ಪ್ರೀತಿಯನ್ನು ಕುರಿತು ಬರೆಯಿರಿ.

ಆ) **ಕೆಳಗಿನ ಎರಡಕ್ಕೆ ಟಿಪ್ಪಣಿ ಬರೆಯಿರಿ.** **(2x4=08)**

೧) ಪುಟ್ಟಗೌರಿ

೨) ಗುರುಸಿದ್ಧ

೩) ಕಡಲೆಕಾಯಿ ಪ್ರಸಂಗ

* * *

QP CODE: 10301B

# ತೃತೀಯ ಸೆಮಿಸ್ಟರ್ ಬಿ.ಎ./ಬಿ.ಎಸ್ಸಿ./ಬಿ.ಎಸ್. ಡಬ್ಲ್ಯೂ. ಪದವಿ ಪರೀಕ್ಷೆ

ಎಪ್ರಿಲ್/ಮೇ 2022

## (SAC/SSC/SWC 010) ಕನ್ನಡ ಭಾಷಾ ಪತ್ರಿಕೆ - ೩

ನುಡಿ ಸಂಪದ - ೩

(2014-15ರ ವಿದ್ಯಾರ್ಥಿಗಳಿಗೆ)

ಅವಧಿ : 3 ಗಂಟೆಗಳು ಗರಿಷ್ಠ ಅಂಕಗಳು : 80

1. ಅ) ಯಾವುದಾದರೂ ಒಂದರ ಭಾವ ಸ್ವಾರಸ್ಯವನ್ನು ಬರೆಯಿರಿ. (1x6=06)

೧) ಅವನೊ ಬುದ್ಧ ಸಿದ್ಧ ಜಗತ್ಪ್ರಸಿದ್ಧನಾಗಿ ಎದ್ದಿದ್ದ
ಅವನ ಮುಖದ ಕಾಂತಿಯೇನು ಉಗುವ ಆ ಪ್ರಶಾಂತಿಯೇನು !
ಕೆಂಡದ ಬಳಿ ಇದ್ದು ಕೂಡ ಈ ಇದ್ದಲು ಇತ್ತು ಹಾಗೆ
ಆಗ ಈಗಿನಂತೆಯೇ ಹೊತ್ತದೇ ಉರಿಯದೆ

೨) ಪ್ರತಿ ವಿದ್ಯೆಯನಾಕೆ ಕುಲ
ಕ್ಷತಿಯಂ ಪತಿಗಪ್ಪ ಹಾನಿಯಂ ಬಗೆಯದೆ
ದುರ್ಮತಿ ಕೊಟ್ಟಳದೆನ್ನರುಮಂ
ಮತಿಗಿಡಿಪುದು ಚೋದ್ಯಮಲ್ತು ಮದನೋನ್ಮಾದಂ

ಆ) ಹತ್ತು ಪದಗಳಿಗೆ ಅರ್ಥ ಬರೆಯಿರಿ. (10x½=05)

ಗುಪ್ಪರ, ದೋರ್ದಂಡ, ಠಕ್ಕ, ಮೌಲ್ಪಿ, ನಿಚ್ಚಳ, ಕುಲಕ್ಷತಿ, ಚಿತ್ತಗ್ಲಾನಿ, ಅಂಜುಳಿ, ಇನ, ಕಯ್ದು, ಅವಕರ್ಣಿಸು, ಅಲರಂಬು, ರಿಪು, ಸೂನು, ಸಾರ್ಕೆ

ಇ) ಯಾವುದಾದರೂ ಎರಡರ ಕುರಿತು ಟಿಪ್ಪಣಿ ಬರೆಯಿರಿ. (2x3=06)

(ಅ) ಡಾ. ಬಿ.ಆರ್. ಅಂಬೇಡ್ಕರ್ (ಆ) ಸಂಕಮ್ಮ (ಇ) ಬುರ್ಖಾದೊಳಗಿನ ಹಾಡು (ಈ) ಪಂಪ

2. ಎರಡು ಪ್ರಶ್ನೆಗಳಿಗೆ ಉತ್ತರಿಸಿ. (2x8=16)

1) ಪಾಂಡವರ ಉದ್ಧಾರಕ್ಕಾಗಿ ಕೃಷ್ಣ ಬಳಸಿದ ಭೇದೋಪಾಯದ ತಂತ್ರವನ್ನು ವಿವರಿಸಿ.

2) 'ಸೀಸನಾಟು' ಕವಿತೆಯಲ್ಲಿ ವ್ಯಕ್ತವಾಗಿರುವ ಹಿಜ್ರಾ ಸಮುದಾಯದ ತವಕ ತಲ್ಲಣಗಳನ್ನು ವಿವರಿಸಿ.

3) ತನ್ನ ವ್ಯಕ್ತಿತ್ವವನ್ನು ತಾನೇ ರೂಪಿಸಿಕೊಳ್ಳುವ ಸ್ವಾಭಿಮಾನಿ ವ್ಯಕ್ತಿತ್ವದ ನಿಲುವು 'ನಾನು ನಾನೇ' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ?

4) 'ಈ ನೆಲದ ಹಾಡು' ಕವಿತೆಯಲ್ಲಿ ವ್ಯಕ್ತವಾಗಿರುವ ಹೆಣ್ಣಿನ ಹಂಬಲವನ್ನು ಕುರಿತು ವಿವರಿಸಿ.

3. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. (3x5=15)

೧) ಮಹಾಭಾರತದ ಪಾತ್ರಗಳ ವೈಶಿಷ್ಟ್ಯತೆಯನ್ನು ಪಂಪ ಹೇಗೆ ವಿಶ್ಲೇಷಿಸಿದ್ದಾನೆ?

೨) ತನ್ನ ಅಸ್ತಿತ್ವಕ್ಕಾಗಿ ಸಿಡಿದೇಳುವ ಕ್ರಾಂತಿಕಾರಿ ಮಹಿಳಾ ವ್ಯಕ್ತಿತ್ವ ತುಡಿತ 'ಚರಿತ್ರ ಮತ್ತು ಕವಿತೆ' ಯಲ್ಲಿ ಹೇಗೆ ವ್ಯಕ್ತವಾಗಿದೆ?

೩) ಪುರುಷ ಪ್ರಧಾನ ವ್ಯವಸ್ಥೆಯ ಶೋಷಕ ನೆಲೆಗಳನ್ನು, ತಂತ್ರಗಳನ್ನು 'ಅಹಲ್ಯೆ' ಕವಿತೆ ಹೇಗೆ ಬಯಲಿಗೆಳೆದಿದೆ?

೪) 'ಪ್ರಾರ್ಥನೆ' ಕವಿತೆಯ ಆಶಯವನ್ನು ವಿವರಿಸಿ.

QP CODE: 10301C

3. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. (3x5=15)

೧) ಕನಕದಾಸರ ಕೀರ್ತನೆಗಳ ಮಹತ್ವವನ್ನು ಕುರಿತು ಬರೆಯಿರಿ.

೨) 'ಯುದ್ಧ - ಒಂದು ಉದ್ಯಮ' ಬರಗೂರರ ಈ ಹೇಳಿಕೆಯನ್ನು ವಿಶ್ಲೇಷಿಸಿ.

೩) 'ಸಂಸ್ಕೃತಿಯ ನಾಶ ಬಹುರಾಷ್ಟ್ರೀಯ ಕಂಪನಿಗಳಿಂದಾಗುತ್ತಿದೆ' - ಚರ್ಚಿಸಿ.

೪) 'ಏಕಲವ್ಯ' ನಾಟಕದಲ್ಲಿ ಶ್ರಮದ ಚಿಂತನೆ ಹೇಗೆ ಬಿಂಬಿತವಾಗಿದೆ? ವಿವರಿಸಿ.

೫) ಶಾಸನಗಳಲ್ಲಿ ನಿರೂಪಿತವಾದ 'ಯುದ್ಧ'ದ ಸ್ವರೂಪವೇನು? ತಿಳಿಸಿ.

೬) ಹಸಿವಿನ ಚಿತ್ರಣವು ಜನಪದ ತ್ರಿಪದಿಯಲ್ಲಿ ಹೇಗೆ ಮೂಡಿ ಬಂದಿದೆ?

4. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. (3x5=15)

೧) ಅಂಬೇಡ್ಕರ್ ಚಿಂತನೆಯಲ್ಲಿ ಬೌದ್ಧಿಕ ಸ್ವಾತಂತ್ರ್ಯ ಹೇಗೆ ವ್ಯಕ್ತವಾಗಿದೆ?

೨) 'ಕಳ್ರು' ಕಥೆಯಲ್ಲಿನ ಹಸಿವಿನ ಚಿತ್ರಣವನ್ನು ಕುರಿತು ಬರೆಯಿರಿ.

೩) ವಚನಗಾರ್ತಿಯರ ದೃಷ್ಟಿಯಲ್ಲಿ 'ಕಾಯಕ ನಿಷ್ಠೆ' ಹೇಗೆ ಮೂಡಿ ಬಂದಿದೆ? ವಿವರಿಸಿ.

೪) 'ಕುರು ಕುಲಾರ್ಕನು ಮರ್ಕನು ಮಸ್ತಮೆಯ್ದಿದರ್' 'ಕಾವ್ಯದ ಭಾಗದಲ್ಲಿ ದುರ್ಯೋಧನನ ಶಾಂತಿ ಸಲಹೆಗಳೇನು?

೫) ದೇವನೂರು ಮಹಾದೇವರ 'ಮಾನವೀಯತೆ'ಯ ಲೇಖನದ ವಿಚಾರಗಳೇನು?

೬) ಹಸಿವನ್ನು ಕುರಿತ 'ಜೇಡರ ದಾಸಿಮಯ್ಯ'ನ ನಿಲುವುಗಳೇನು?

* * *

QP CODE: 15401

# ನಾಲ್ಕನೆಯ ಸೆಮಿಸ್ಟರ್ ಬಿ.ಎಸ್ಸಿ., ಬಿ.ಸಿ.ಎ., ಬಿ.ಎಸ್ಸಿ - ಆನರ್ಸ್, ಪದವಿ ಪರೀಕ್ಷೆ

ಎಪ್ರಿಲ್ / ಮೇ 2022

(2019-20 ನೇ ಸಾಲಿನ ವಿದ್ಯಾರ್ಥಿಗಳಿಗೆ)

## ಕನ್ನಡ ಭಾಷಾ ಪತ್ರಿಕೆ - 4

## SSD/SBD - 010 : ನುಡಿ ಸಂಭ್ರಮ - 4

ಸಮಯ : 3 ಗಂಟೆಗಳು ಅಂಕಗಳು : 80

1. ಅ) ಒಂದರ ಭಾವ ಸ್ವಾರಸ್ಯವನ್ನು ಸಂದರ್ಭದೊಂದಿಗೆ ವಿವರಿಸಿ. 1x5=5

ಎ) ಬಸವಟಿದು ಕಣ್ಣ ನೀರಿಂ
ದೆಸೆಗೆಟ್ಟೆಲೆ ಮಗನೆ ನಿನ್ನನಿನ್ನಾರ್ ಕಾಯ
ಲ್ಕೆ ಸಮರ್ಥರೆನ್ನುತ್ತಾಗಳ್
ಬಿಸು ಸುಯ್ದುಂ ನೋಡಿ ಜನಕನೆನ್ನಯ ಮೊಗಮಂ

ಅಥವಾ

ಬಿ) ಕೊಂಬೆ ರೆಂಬೆಗಳೆಲ್ಲ ಒಣಗಿ ಬೇಸಿಗೆಯುರಿಗೆ
ಕಂಕಾಲದಂತೆ ದುಷ್ಕಾಲಕ್ಕೆ ಸರ್ವದಾ ಸಂಕೇತ ನಿಂತವರು
ಒಡೆಯ, ಧಣಿ, ಜೀಯ ಎನ್ನುತ್ತಲೇ ಬಗ್ಗಿ ಕುಗ್ಗಿ ಮುರುಟಿ ಸುರುಟಿ
ಉದ್ದುದ್ದ ನೆಗೆಯಬೇಕಾಗಿದ್ದ ನೆಗೆಯುತ್ತಿದ್ದ ಜ್ವಾಲೆಯನ್ನ ಮುಕಿ ಕಿಡಿ ಮಾಡಿ ಕಿಡಿ
ಚೂರಿದ್ದಲಂತಾಗಿ ನಂದಿಯೇ ಹೋದವರು

ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ. 8x½=4

ನೆವ, ಪುರುಡು, ಲುಬ್ಧಕ, ಸೇದೆ, ಗುದ್ದ, ಏಳಲಿ, ಖೂಳ, ಗರ, ಪಕೀರ, ಪ್ರಕರ, ಸ್ವನ, ಇರಿ.

ಇ) ಯಾವುದಾದರು ಮೂರಕ್ಕೆ ಟಿಪ್ಪಣಿ ಬರೆಯಿರಿ : 3x3=9

1) ಶಾಲ್ಮಲೀ ವೃಕ್ಷ 2) ನೆನಪು 3) ದೂರ್ನಾಸ ಮುನಿ
4) ಜಮಣೆ ಬಾಯಿ 5) ಮೊಂಡು ಕೈ ಭಿಕ್ಷುಕ

2. ಎರಡು ಪ್ರಶ್ನೆಗಳಿಗೆ ಉತ್ತರಿಸಿ. 2x8=16

ಅ) 'ವೈಶಂಪಾಯನ ವೃತ್ತಾಂತ' ಪದ್ಯ ಭಾಗದಲ್ಲಿ ವ್ಯಕ್ತವಾದ ಗಿಳಿಯ ಧಾರುಣ ಬದುಕನ್ನು ವಿವರಿಸಿ.

ಅಥವಾ

ಮಾವೋತ್ಸೆ ತುಂಗನ ದ್ವಂದ್ವ ವ್ಯಕ್ತಿತ್ವವನ್ನು 'ಮರೆತೇನೆಂದರೆ ಮರೆಯಲಿ ಹೆಂಗಾ ! ಪದ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

ಆ) 'ಹೆಣದ ಮೇಲಿನ ದುಡ್ಡು ಮತ್ತು ಮದುವೆಯ ಊಟ' ಗದ್ಯವು ದಲಿತರ ಬದುಕನ್ನು ಬಿಂಬಿಸಿರುವ ಬಗೆಯನ್ನು ವಿಶ್ಲೇಷಿಸಿ.

ಅಥವಾ

'ಕೊನೆಯ ಗಿರಾಕಿ' ಕಥೆ ಕಾಣಿಯ ದುರಂತ ಬದುಕಿನ ಚಿತ್ರಣ' ವಿವರಿಸಿ.

Kannada



4x5=20

3. ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ.

1) ನೆನಪುಗಳಿಗೆ ನಿಸಾರ್ ಅಹಮದ್ ಅವರ ನಿವೇದನೆ ಏನು? ವಿವರಿಸಿ.
2) ಮಗನಿಗೆ ಕಾಡಿದ ಅವ್ವನ ನೆನಪುಗಳನ್ನು 'ಅವ್ವ-2' ಕವಿತೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.
3) ಸ್ಕೂಟರ್ ರಿಪೇರಿ ಗದ್ಯ ಭಾಗದ ಸ್ವಾರಸ್ಯವನ್ನು ಬರೆಯಿರಿ.
4) ಮೊಸರು ಅವಲಕ್ಕಿಯ ವಿಶೇಷತೆಗಳನ್ನು ಪ್ರಬಂಧದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.
5) ಬಸವಣ್ಣನವರ ವಚನಗಳ ಸಾಮಾಜಿಕ ಸಂದೇಶವನ್ನು ಗುರುತಿಸಿ.
6) 'ಬಡವನಾದರೇನು ಪ್ರಿಯೆ' ಕವನದ ಆಶಯಗಳನ್ನು ಚರ್ಚಿಸಿ.
7) ಹಸಿವು ಮತ್ತು ಬತ್ತಲೆಯ ಅಂತರಾಳದಿಂದಲೇ ಕಾವ್ಯ ಹುಟ್ಟುವ ಬಗೆಯನ್ನು ವಿಶ್ಲೇಷಿಸಿ.

2x8=16

4. ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ.

1) ಜ್ಯೋತಿಷ್ಯ ಅರ್ಥಪೂರ್ಣವೊ, ಅರ್ಥ ರಹಿತವೋ? ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.
2) ಮರೆವಿಗೆ ಕಾರಣಗಳು ಹಾಗೂ ಪರಿಹಾರಗಳನ್ನು ವಿವರಿಸಿ.
3) ದಿಕ್ಕನ್ನು ತಿಳಿಯಲು ನಾವಿಕರು ಬಳಸುತ್ತಿದ್ದ ಉಪಕರಣಗಳು ಹಾಗೂ ವಿಧಾನಗಳನ್ನು ಸೋದಾಹರಣವಾಗಿ ವಿವರಿಸಿ.

2x5=10

ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ.

1) ಸಮೂಹ ಸನ್ನಿಯ ಅಪಾಯಗಳನ್ನು 'ಗಜಮುಖನ ಕ್ಷೀರದಾಹ' ಪ್ರಸಂಗದ ಉದಾಹರಣೆಯೊಂದಿಗೆ ಸ್ಪಷ್ಟಪಡಿಸಿ.
2) ದೋಸೆ ತಯಾರಿಕೆಯಲ್ಲಿ ನಡೆಯುವ ರಾಸಾಯನ ಕ್ರಿಯೆಯನ್ನು ವಿವರಿಸಿ.
3) ನೆನಪಿನ ಪ್ರಕ್ರಿಯೆಯಲ್ಲಿ ಮೆದುಳಿನ ಪಾತ್ರ

* * *

QP CODE: 10301C

# ತೃತೀಯ ಸೆಮಿಸ್ಟರ್ ಬಿ.ಎ./ಬಿ.ಎಸ್ಸಿ./ಬಿ.ಎಸ್. ಡಬ್ಲ್ಯೂ. ಪದವಿ ಪರೀಕ್ಷೆ

ಏಪ್ರಿಲ್/ಮೇ 2022

## (SAC/SSC/SWC 010) ಕನ್ನಡ ಭಾಷಾ ಪತ್ರಿಕೆ - ೩

ಸಾಹಿತ್ಯ ಸಂವೇದನೆ ಭಾಗ - ೩

(2011-12ರ ವಿದ್ಯಾರ್ಥಿಗಳು)

ಅವಧಿ : 3 ಗಂಟೆಗಳು

ಗರಿಷ್ಠ ಅಂಕಗಳು : 80

1. ಅ) ಯಾವುದಾದರೂ ಒಂದರ ಭಾವ ಸ್ವಾರಸ್ಯವನ್ನು ಸಂದರ್ಭ ಸಹಿತ ವಿವರಿಸಿ. (1x7=07)

೧) ಧರೆಯೊಳಗೆ ಕಡು ಮೂರ್ಖರಿವರಿ
ಬ್ಬರು ಕಣಾ ಮರಿಯೋಧನನು ದಶ
ಶಿರನು ಗೋಗ್ರಹಣದಲಿ ವನಭಂಗದಲಿ ಮುಂಕೊಂಡು
ಅರಿನೃಪರ ಸತ್ವಾತಿಶಯದು
ಬ್ಬರದ ಬಲುಹನು ಕಂಡು ಕಂಡೆ
ಚ್ಚರದೆ ಮರುಳಹುದುಚಿತವೇ ಭೂಪಾಲ ಕೇಳೆಂದ

೨) ಜಯಮಂ ಕೈಕೊಳ್ವುದು ದೃ
ಷ್ಟಿಯುದ್ಧ ಜಳಯುದ್ಧ ಮಲ್ಲಯುದ್ಧದೊಳೆ ಜನ
ಕ್ಷಯ ಕರಣದೊಳೇಂ ಪಾಪಮು
ಮಯಶಮುಮಪ್ಪನಿತೆ ದೇವ ಕಡೆಗಣೆಪುದಿದಂ

ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ. (8x½=04)

ಕರಣಿಕ, ಸುರ, ಶೋಣಿತ, ಕ್ಷಿತಿ, ಹುಸಿ, ಅಂಬರ, ಅರಿ, ದಶಶಿರ, ಜವ, ಶಿಖಿ, ಬಾನು, ಧರೆ

ಇ) ಯಾವುದಾದರೂ ಮೂರನ್ನು ಕುರಿತು ಟಿಪ್ಪಣಿ ಬರೆಯಿರಿ. (3x3=09)

(ಅ) ಅಲ್ಲಾ ಭಕ್ಷಿ (ಆ) ಬಾಹುಬಲಿ (ಇ) ಕುಮಾರವ್ಯಾಸ (ಈ) ಮೊಂಡುಕೈ ಭಿಕ್ಷುಕ

(1x10=10)

2. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಅ) 'ಯುದ್ಧ' ಕುರಿತಂತೆ ಎಸ್.ಎಸ್. ಹಿರೇಮಠರ ಅಭಿಪ್ರಾಯಗಳನ್ನು ಸಂಗ್ರಹಿಸಿ ಬರೆಯಿರಿ.

**ಅಥವಾ**

'ಶಾಂತಿ'ಯ ಸಂದೇಶವನ್ನು ಸಾರುವ ಬಾಹುಬಲಿಯ ನಿರ್ಧಾರವನ್ನು ಚರ್ಚಿಸಿ.

(1x10=10)

ಆ) ಹಸಿವಿನ ಚಿತ್ರಣವು 'ರೊಟ್ಟಿ' ಕಥೆಯಲ್ಲಿ ಹೇಗೆ ಚಿತ್ರಿತವಾಗಿದೆ ವಿವರಿಸಿ.

**ಅಥವಾ**

'ಹಸಿವು ಮತ್ತು ಶ್ರಮ ಸಂಸ್ಕೃತಿ' ಅಲ್ಲಾಭಕ್ಷಿ ಮತ್ತು ಅವನ ನಾಯಿ ಕಥೆಯಲ್ಲಿ ಹೇಗೆ ಮೂಡಿ ಬಂದಿದೆ? ತಿಳಿಸಿ.

(1x10=10)

ಇ) 'ವರ್ಗ ಸಂಘರ್ಷ'ದ ವಿಚಾರಗಳನ್ನು ಲೇಖಕರ ಆಲೋಚನೆಯಲ್ಲಿ ವಿವರಿಸಿ.

**ಅಥವಾ**

ಎಚ್. ನರಸಿಂಹಯ್ಯನವರ ವೈಚಾರಿಕ ಪ್ರಜ್ಞೆಯ ಅಡಚಣೆಗಳನ್ನು ಕುರಿತು ಬರೆಯಿರಿ.

QP CODE: 10301C

3. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. (3x5=15)

೧) ಕನಕದಾಸರ ಕೀರ್ತನೆಗಳ ಮಹತ್ವವನ್ನು ಕುರಿತು ಬರೆಯಿರಿ.

೨) 'ಯುದ್ಧ - ಒಂದು ಉದ್ಯಮ' ಬರಗೂರರ ಈ ಹೇಳಿಕೆಯನ್ನು ವಿಶ್ಲೇಷಿಸಿ.

೩) 'ಸಂಸ್ಕೃತಿಯ ನಾಶ ಬಹುರಾಷ್ಟ್ರೀಯ ಕಂಪನಿಗಳಿಂದಾಗುತ್ತಿದೆ' - ಚರ್ಚಿಸಿ.

೪) 'ಏಕಲವ್ಯ' ನಾಟಕದಲ್ಲಿ ಶ್ರಮದ ಚಿಂತನೆ ಹೇಗೆ ಬಿಂಬಿತವಾಗಿದೆ? ವಿವರಿಸಿ.

೫) ಶಾಸನಗಳಲ್ಲಿ ನಿರೂಪಿತವಾದ 'ಯುದ್ಧ'ದ ಸ್ವರೂಪವೇನು? ತಿಳಿಸಿ.

೬) ಹಸಿವಿನ ಚಿತ್ರಣವು ಜನಪದ ತ್ರಿಪದಿಯಲ್ಲಿ ಹೇಗೆ ಮೂಡಿ ಬಂದಿದೆ?

4. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. (3x5=15)

೧) ಅಂಬೇಡ್ಕರ್ ಚಿಂತನೆಯಲ್ಲಿ ಬೌದ್ಧಿಕ ಸ್ವಾತಂತ್ರ್ಯ ಹೇಗೆ ವ್ಯಕ್ತವಾಗಿದೆ?

೨) 'ಕಳ್ಳು' ಕಥೆಯಲ್ಲಿನ ಹಸಿವಿನ ಚಿತ್ರಣವನ್ನು ಕುರಿತು ಬರೆಯಿರಿ.

೩) ವಚನಗಾರ್ತಿಯರ ದೃಷ್ಟಿಯಲ್ಲಿ 'ಕಾಯಕ ನಿಷ್ಠೆ' ಹೇಗೆ ಮೂಡಿ ಬಂದಿದೆ? ವಿವರಿಸಿ.

೪) 'ಕುರು ಕುಲಾರ್ಕನು ಮರ್ಕನು ಮಸ್ತಮೆಯ್ದಿದರ್ 'ಕಾವ್ಯದ ಭಾಗದಲ್ಲಿ ದುರ್ಯೋಧನನ ಶಾಂತಿ ಸಲಹೆಗಳೇನು?

೫) ದೇವನೂರು ಮಹಾದೇವರ 'ಮಾನವೀಯತೆ'ಯ ಲೇಖನದ ವಿಚಾರಗಳೇನು?

೬) ಹಸಿವನ್ನು ಕುರಿತ 'ಜೇಡರ ದಾಸಿಮಯ್ಯ'ನ ನಿಲುವುಗಳೇನು?

* * *